ಕನ್ನಡ ಪಂಡಿತ ತರಬೇತಿ ಕೇಂದ್ರದ ಬಗ್ಗೆ.

1972. ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನ್ನಡ ಪಂಡಿತ ತರಬೇತಿಯ ಕೇಂದ್ರವನ್ನು ಸರ್ಕಾರ ಮುಚ್ಚಲು ಉದ್ದೇಶಿಸಿದೆಯೇ :

ಆ) ಮುಚ್ಚಲು ಉದ್ದೇಶಿಸಿದ್ದಲ್ಲಿ ಈಗಾಗಲೇ ತರಬೇತಿ ಪಡೆದಿರುವ ಅಭ್ಯರ್ಥಿಗಳನ್ನು ಹೇಗೆ ಸರ್ಕಾರ ಸೇವೆಯಲ್ಲಿ ಉಳಿಸಿಕೊಳ್ಳುತ್ತದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1) ಇಲ್ಲ.

2) ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಮೇಲೆ ಜನ ಪ್ರಯಾಣ ಮಾಡುವುದನ್ನು ನಿಲ್ಲಿಸುವ ಬಗ್ಗೆ.

1975. ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ಮೇಲೆ ಜನ ಕುಳಿತು ಪ್ರಯಾಣ ಮಾಡುವುದು ಸರ್ಕಾರಕ್ಕೆ ತಿಳಿದಿದೆಯೇ :

ಆ) ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳು ಏನು :

ಇ) ಈಗಲಾದರೂ ಬಸ್ಸುಗಳ ಮೇಲೆ ಕುಳಿತು ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವರ್ಕ್ಸ್ ಸಚಿವರು) :

ಅ) ಹೌದು.

ಆ) (1) ದಿನಾಂಕ 13-3-92ರಿಂದ ಗುಲ್ಬರ್ಗ ಜಿಲ್ಲೆಯಲ್ಲಿ 6 ಹೆಚ್ಚುವರಿ ಮಾರ್ಗಸೂಚಿಗಳನ್ನು (ಬಸ್ಸುಗಳನ್ನು) ಪ್ರಾರಂಭಿಸಲಾಗಿದೆ.

(2) ಸಾರಿಗೆಗಳು ರದ್ದಾಗುವುದನ್ನು ಕಡಿಮೆ ಮಾಡಲು ಮತ್ತು ಅವುಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆಗೊಳಪಡಿಸಲು ಕ್ರಮ ಕೈಗೊಳ್ಳಲಾಗಿದೆ.

(3) ಕಡಿಮೆ ಅಂತರದ ಟ್ರಿಪ್ಪುಗಳನ್ನು ಹೆಚ್ಚಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗುತ್ತಿದೆ.

ಇ) ಪ್ರಕರಣದ ಒತ್ತಡವನ್ನು ನಿವಾರಿಸುವ ಸಲುವಾಗಿ 1992-93ನೇ ಸಾಲಿಗೆ ಗುಲ್ಬರ್ಗ ಜಿಲ್ಲೆಯಲ್ಲಿ 37 ಬಸ್ಸುಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ಆನೇಕಲ್ ತಾಲ್ಲೂಕ್ ಬೊಮ್ಮಸಂದ್ರದಲ್ಲಿ ವಿದ್ಯುತ್ ನಿಲುಗಡೆಯಾಗುತ್ತಿರುವುದರ ಬಗ್ಗೆ

1976 ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆನೇಕಲ್ ತಾಲ್ಲೂಕು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಪ್ರತಿದಿನ ಬೇಡಿಕೆ ಇರತಕ್ಕ ವಿದ್ಯುತ್ ಪ್ರಮಾಣ ಎಷ್ಟು :